# ರಾಧಾ 2016

ಮುಳುಗಬೇಕೆಂದು; ಕತ್ತಲೆಯು ಬೆಳಕಿನಲಿ ಮುಳುಗಿ ಬೆಳಗಾಗುವಂತೆ? ಬತ್ತಿಯು ಎಣ್ಣೆಯಲ್ಲಿ ಮುಳಗಿ ದೀಪವಾಗುವಂತೆ? ಸಿಹಿಯು ಜೊಲ್ಲಿನಲ್ಲಿ ಮುಳಗಿ ಜೇನಾಗುವಂತೆ!

ನನ್ನಂತೆಯೇ ನಿಮಗೂ ಅನಿಸಿದ್ದಲ್ಲಿ, ಸರ್ವತಾ ಪ್ರೇಮ ಸಂಜೀವಿನಿಯಲ್ಲಿ ಲೀನವಾಗ ಬಯಸಿದರೆ, ಇದು ಕೇವಲ ಬಯಕೆ ಅಲ್ಲ, ಬೆಂಕಿಗೂ ಗಾಳಿಗೂ ಸತ್ಯವಾದುದು, ತೀವ್ರವಾದುದುದೆಂದು ಅನಿಸಿದಲ್ಲಿ ಮಾತ್ರ ನಿರುಮ್ಮಳವಾಗಿ ಸ್ವಚ್ಛವಾಗಿ ನನ್ನಿಯ ಭಿಕ್ಷೆಗೆಂದು ಬನ್ನಿ. ಎರೆದೆರೆದು ಅರ್ಪಿಸುವೆ ನನ್ನೆಲ್ಲಾ ನನ್ನಿಯನು... ಖಾಲಿ ಮಾಡಿಕೊಂಡು ಮತ್ತೆ ನಾ ಭಿಕ್ಷೆಗೆಂದು ನಿಮ್ಮ ಮುಂದೆ ನಿಲ್ಲುವೆ. ಹೀಗೆಯೇ ಕೊಟ್ಟು ತೆಗೆದು ಉಳಿದುಬಿಡೋಣ ಅಳಿದುಬಿಡೋಣ.

ಇತಿ, ಬೆಳಕಿನಷ್ಟೇ ಸತ್ಯವಾಗಿ ನಿಮ್ಮ ಪ್ರೀತಿಸುವ,

ರಾಧಾ 2016'

ಬರೆಯುವ ಕೈಗಳೂ ಸಹಾ ಅವರನ್ನರಸುವಷ್ಟು ತೀವ್ರವಾಗಿ ಎಳೆದೊಯ್ಯುತ್ತಿತ್ತು. ದಿನಾಂಕ, ತಿಂಗಳಿಗಿಂತ ವರುಷವು ಪುಸ್ತಕದ ಪ್ರತ್ಯೇಕ ಪುಟದಂತೆ ಅಂದಾಜಿಗೆ ನಿಲುಕುವುದರಿಂದ ಅವು ನನಗೆ ಯಾವಾಗಲೂ ಮುಖ್ಯವೆನಿಸುತ್ತವೆ. ಇಷ್ಟು ಸಾಕೆಂದು ಬರೆವುದ ನಿಲ್ಲಿಸಿ ಪತ್ರವನ್ನೇ ನೋಡುತ್ತಾ ಕುಳಿತುಬಿಟ್ಟೆ. ರಮ್ಯಾ ಬಂದು 'ಊಟಕ್ಕೆ ಬರೊಲ್ವಾ' ಎಂದು ಕೂಗಿದಾಗಲೇ ನಾನು ಆಫೀಸಿನಲ್ಲಿದ್ದೇನೆಂಬುದು ನೆನಪಾಗಿದ್ದು. ಎಷ್ಟೊಂದು ಖಾಲಿ ಕುರ್ಚಿಗಳು. ನಾನು ಕುರ್ಚಿಯಾದರೂ ಆಗಬಾರದಿತ್ತೆ, ಎಂದಾದರೂ ಒಮ್ಮೆ ಯಾರಾದರೂ ಕೂತು ಧೇನಿಸುವಾಗ ನನ್ನಾತ್ಮವ ಮುಟ್ಟುತ್ತಿದ್ದರೇನೋ... ಎಂದನಿಸಿತು.

ಈ ಪತ್ರವು ಅವರಿಗೆ ಸಿಗುವುದಾದರೂ ಹೇಗೆ? ಯಾರ ಮೂಲಕ ಎಲ್ಲಿ ಕಳಿಸಬೇಕು? ಅವರ್‍ಯಾರೆಂದು, ಎಲ್ಲಿಹರೆಂದು ತಿಳಿಯುವುದಾದರೂ ಹೇಗೆ? ಇದು ಸಿಕ್ಕ ಮೇಲೇ ತಾನೆ ನಾನ್ಯಾರೆಂದು ಅವರಿಗೆ ತಿಳಿಯುವುದು ಮತ್ತು ಅವರು ನನ್ನವರೇ ಆಗಿದ್ದಲ್ಲಿ ಅವರ್‍ಯಾರೆಂದು ನನಗೆ ತಿಳಿಯುವುದು. ಏನು ಮಾಡುವುದೆಂಬ ಮಾರ್ಗೋಪಾಯಕ್ಕೆ ಬೀಳುತ್ತಿದ್ದಂತೆ, ನನ್ನ ನೇರಕ್ಕಿದ್ದ ಡಿಸ್‌ಪ್ಲೇ ಬೋರ್ಡು 'ನನಗೆ ನಿನ್ನ ಪತ್ರವ ಕೊಡು, ಸಹಾಯ ಮಾಡುತ್ತೇನೆ' ಎಂದು ಕೂಗಿದಂತನಿಸಿ, ಪ್ರಿಂಟ್‌ಗೆ ಕೊಟ್ಟಿದ್ದ ಪತ್ರವ ತೆಗೆದುಕೊಂಡು ಅದರ ಮೇಲೆ ಅಂಟಿಸಿಬಿಟ್ಟೆ. ಹಿಂತಿರುಗಿ ನನ್ನ ಜಾಗದಿಂದ ಕೂತು ನೋಡುತ್ತಿದ್ದಂತೆ, ಸಂಜೆ ಬಾನಲ್ಲಿ ಹಕ್ಕಿಗಳು ಗೂಡು ಸೇರಲು